ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ

# ಸಿ.ಸಿ. ಸಂಖ್ಯೆ: 320/2014

ಫ್ರಾಸಾ – 2

ಚಾಸಾ – **6**

**ಸಾಕ್ಷಿಯು ದಿಃ 17.12.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ಜಯಣ್ಣ ಜಿ.ಎಂ. |
| ತಂದೆಯ ಹೆಸರು | : | ಮಾದವಾಚಾರ್ |
| ವಯಸ್ಸು | : | 51 ವರ್ಷ |
| ವೃತ್ತಿ | : | ಗಸ್ತು ಅರಣ್ಯ ಪಾಲಕ |
| ವಾಸಸ್ಥಳ | : | ಸಕ್ಲೇಶಪುರ |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :–**

ನಾನು 2005 ರಿಂದ 2010ರ ವರೆಗೆ ಮದ್ದೂರು ಅರಣ್ಯ ವಲಯದಲ್ಲಿ ಅರಣ್ಯ ವೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 15.04.2023 ರಂದು ದಾಖಲಿಸಿರುವ ದೋಷಾರೋಪಣೆಗೆ ಮುನ್ನ ಸಾಕ್ಷ್ಯದ ಹೇಳಿಕೆಯನ್ನು ಪರಿಗಣಿಸಬಹುದಾಗಿರುತ್ತದೆ ಎಂದು ಸಾಕ್ಷಿ ಮತ್ತು ಮಾನ್ಯ ಎಪಿಪಿ ರವರು ಕೋರಿರುತ್ತಾರೆ. ಆರೋಪಿಗಳ ಪರ ವಕೀಲರು ಸಹ ಸಮ್ಮತಿ ಸೂಚಿಸಿರುವುದರಿಂದ ದೋಷಾರೋಪಣೆಗೆ ಮುನ್ನ ದಾಖಲಿಸಿದ ಸಾಕ್ಷ್ಯವನ್ನೇ ಪರಿಗಣಿಸಲಾಗಿರುತ್ತದೆ.

**ಪಾಟೀ ಸವಾಲು :– ಆರೋಪಿಗಳ ಪರ ವಕೀಲರಿಂದ**

ದಿಃ 17.12.2008 ರಂದು ಆರೋಪಿಗಳನ್ನು ಬಾಡಿ ವಾರಂಟ್ ಮೇಲೆ ಕೇರಳಾದಿಂದ ನಾನು ಮತ್ತು ಸಿಬ್ಬಂದಿಗಳು ಕರೆತಂದಿರುತ್ತೇವೆ. ಆ ದಿನ ಆರೋಪಿಗಳನ್ನು ಕಛೇರಿಗೆ ಕರೆದುಕೊಂಡು ಬಂದಾಗ ಎಷ್ಟು ಸಮಯವಾಗಿತ್ತು ಎಂದು ನೆನಪಿಲ್ಲ. ಆ ಸಮಯದಲ್ಲಿ ಕಛೇರಿಯಲ್ಲಿ ಚಾಸಾ 1, 2, 5 ಮತ್ತು ವನಪಾಲಕರಾದ ಗೋವಿಂದಯ್ಯ ರವರು ಇದ್ದರು. ಕಛೆರಿಯಿಂದ ಆರೋಪಿಗಳನ್ನು ನಮ್ಮ ಇಲಾಖಾ ವಾಹನದಲ್ಲಿ ಕೃತ್ಯ ಸ್ಥಳಕ್ಕೆ ನಾವೇ ಕರೆದುಕೊಂಡು ಹೋಗಿರುತ್ತೇವೆ. ಸ್ಥಳವನ್ನು ಆರೋಪಿಗಳು ತೋರಿಸಿಲ್ಲ ಎಂದರೆ ಸಾಕ್ಷಿಯು ಆರೋಪಿಗಳೇ ನಮ್ಮನ್ನು ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಗಳ ಪೈಕಿ ಯಾರು ಜಾಗವನ್ನು ತೋರಿಸಿದರು ಎಂದರೆ ಸಾಕ್ಷಿಯು 1ನೇ ಆರೋಪಿಯು ತೋರಿಸಿದ್ದರು ಎಂದು ನುಡಿಯುತ್ತಾರೆ. ಘಟನೆ ನಡೆದ ದಿನಕ್ಕೂ ಪಂಚನಾಮೆ ಮಾಡಿದ ದಿನಕ್ಕೂ 17 ದಿನ ಕಳೆದಿತ್ತು. ಸುಮಾರು ದಿನ ಕಳೆದಿದ್ದ ಕಾರಣ ಇಂತಹದ್ದೇ ಜಾಗ ಎಂದು ನಿಖರವಾಗಿ ಅವರಿಗೆ ಹೇಳಲಾಗುವುದಿಲ್ಲ ಎಂದರೆ ಸಾಕ್ಷಿಯು ಆರೋಪಿಗಳು ತೊರಿಸಿದ ಜಾಗದಲ್ಲಿ ಸ್ಥಳ ಪಂಚನಾಮೆ ಮಾಡಿದ್ದೇವೆ ಎಂದು ನುಡಿಯುತ್ತಾರೆ.

2. ವಶಪಡಿಸಿಕೊಂಡಿದ್ದೇವೆ ಎನ್ನಲಾದ ಜಿಂಕೆ ಮಾಂಸದಲ್ಲಿ ಗುಂಡು ಪತ್ತೆಯಾಗಿರುವುದಿಲ್ಲ. ಜಿಂಕೆಯ ತಲೆಯನ್ನು ವಶಪಡಿಸಿಕೊಂಡಿರುವುದಿಲ್ಲ. ಸಾಮಾನ್ಯವಾಗಿ ದೊಡ್ಡ ಪ್ರಾಣಿಗಳು ಇತರ ಪ್ರಾಣಿಗಳನ್ನು ಕೊಂದು ತಿಂದ ನಂತರ ಉಳಿಕೆ ಮಾಂಸವನ್ನು ಚಿಕ್ಕ ಚಿಕ್ಕ ಪ್ರಾಣಿಗಳು ತೆಗೆದುಕೊಂಡು ಹೋಗಿ ಶೇಖರಿಸಿ ಇಟ್ಟುಕೊಂಡಿರುತ್ತವೆ ಎಂದರೆ ಸರಿ. ಕೆಎಲ್ –10–ಇ–5072 ವಾಹನವನ್ನು ಕೃತ್ಯಕ್ಕೆ ಬಳಸಿರುವ ಬಗ್ಗೆ ಮತ್ತು ಅದರಲ್ಲಿ ಜಿಂಕೆಯ ಮಾಂಸವನ್ನು ಹಾಕಿಕೊಂಡು ಹೋಗಿರುವುದರ ಬಗ್ಗೆ ನನ್ನ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಸ್ಥಳ ಪಂಚನಾಮೆ ಸ್ಥಳದಲ್ಲಿ ಯಾವುದೇ ರಕ್ತದ ಕಲೆಗಳನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ. ಆ ಸ್ಥಳದಲ್ಲಿ ಬೇರೆ ಪ್ರಾಣಿಗಳು ಸಹ ಭೇಟಿಯಾಡಿರಬಹುದು ಎಂದರೆ ನನಗೆ ಗೊತ್ತಿಲ್ಲ. ಕೃತ್ಯ ಸ್ಥಳ ದಿಂದ ನಮ್ಮ ಕಛೇರಿಗೆ ಸುಮಾರು 5–6 ಕಿ.ಮೀ ಅಂತರ ಇದೆ.

ಮೊದಲನೇ ಪಂಚನಾಮೆಗೆ ನಾನು ಹೋಗಿಲ್ಲ ಎಂದರೆ ಸರಿ. ಕೃತ್ಯ ಸ್ಥಳ ಗುಂಡ್ಲುಪೇಟೆ ಸುಲ್ತಾನ್ ಬತೇರಿ ಮುಖ್ಯ ರಸ್ತೆಯಾಗಿರುತ್ತದೆ ಎಂದರೆ ಸಾಕ್ಷಿಯು ಮುಖ್ಯ ರಸ್ತೆಯಿಂದ 30 ಮೀಟರ್ ದೂರದಲ್ಲಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಮುಖ್ಯ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತವೆ ಮತ್ತು ರಾತ್ರಿ 9.00 ರಿಂದ ಬೆಳಿಗ್ಗೆ 6.00 ರವರೆಗೆ ವಾಹನಗಳು ಓಡಾಡಲು ಅನುಮತಿ ಇಲ್ಲ ಎಂದರೆ ಸರಿ. ಯಾವಾಗಲೂ ನಾವು ನಮ್ಮ ವಲಯದಲ್ಲಿ ಪದೇ ಪದೇ ಬಿಟ್ ಮಾಡುತ್ತಿರುತ್ತೇವೆ ಎಂದರೆ ಸರಿ. ಸಾರ್ವಜನಿಕರಿಗೆ ಅರಣ್ಯದಲ್ಲಿ ಹಾದು ಹೋಗುವ ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸಲು ಅನುಮತಿಸುವುದಿಲ್ಲ ಎಂದರೆ ಸರಿ. 1 ರಿಂದ 3ನೇ ಆರೋಪಿಗಳ ಹೇಳಿಕೆ ದಾಖಲಿಸಿಲ್ಲ ಎಂದರೆ ಸರಿಯಲ್ಲ. 1 ರಿಂದ 3 ನೇ ಆರೋಪಿಗಳಿಗೆ ಕನ್ನಡ ಬರುವುದಿಲ್ಲ ಎಂದರೆ ಸಾಕ್ಷಿಯು ಸ್ವಲ್ಪ ಸ್ವಲ್ಪ ಬರುತ್ತದೆ ಎಂದು ನುಡಿಯುತ್ತಾರೆ. 1 ರಿಂದ 3ನೇ ಆರೋಪಿಗಳಿಗೆ ಕನ್ನಡ ಬಾರದ ಕಾರಣ ಅವರು ಯಾವುದೇ ಹೇಳಿಕೆ ನನ್ನ ಮುಂದೆ ನೀಡಿಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಕೇರಳ ಅರಣ್ಯ ಅಧಿಕಾರಿಗಳ ಮಾತು ಕೇಳಿ ಸುಳ್ಳು ಪಂಚನಾಮೆ ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ